# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)

**ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.**

gdcribangalore@gmail.com


ಸಂಖ್ಯೆ:ಸದಂಕಾಸಂಸಂ/ ಸಿ(1)/05/2014–15

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,

ದಿನಾಂಕ:07.10.2015

## ಅಧಿಸೂಚನೆ

ವಿಷಯ:– ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯಲ್ಲಿ ಖಾಲಿಯಿರುವ ದಂತ ಆರೋಗ್ಯಾಧಿಕಾರಿ ಹುದ್ದೆಗಳ ನೇಮಕಾತಿ ಮಾಡುವ ಬಗ್ಗೆ–ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಮತ್ತು ಕಾಯ್ದಿರಿಸಿದ ಪಟ್ಟಿ

ಉಲ್ಲೇಖ:– 1. ಸರ್ಕಾರದ ಪತ್ರ ಸಂಖ್ಯೆ:ಆಕುಕ 264 ಆರ್‌ಜಿಯು 2013 ದಿನಾಂಕ:28.12.2013

2. ಈ ಸಂಸ್ಥೆಯ ಅಧಿಸೂಚನೆ ಸಂಖ್ಯೆ:ಸದಂಕಾಸಂಸಂ/ಸಿ(1)/05/2014–15 ದಿನಾಂಕ:21.08.2014
3. ಆಯ್ಕೆ ಸಮಿತಿ ಸಭೆ ನಡವಳಿ ದಿನಾಂಕ:22.12.2014
4. ತಾತ್ಕಾಲಿಕ ಆಯ್ಕೆ ಪಟ್ಟಿಯ ಅಧಿಸೂಚನೆ ದಿನಾಂಕ:26.12.2014

-------

ಉಲ್ಲೇಖ(1)ರ ಸರ್ಕಾರಿ ಪತ್ರ ಹಾಗೂ ಸಂಸ್ಥೆಯ ದಿನಾಂಕ:11.08.2014ರ 11ನೇ ಆಡಳಿತ ಪರಿಷತ್ ಸಭೆಯ ನಿರ್ಣಯದನ್ವಯ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸ್ವಾಯತ್ತ ಸಂಸ್ಥೆಯಲ್ಲಿ ಖಾಲಿಯಿರುವ 3 ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ರೂ.28100–700–28800–800–33600–900–39000–1050–45300–1200–50100ಗಳ ವೇತನ ಶ್ರೇಣಿಯಲ್ಲಿ ಭರ್ತಿ ಮಾಡುವ ಸಲುವಾಗಿ ಉಲ್ಲೇಖ(2)ರ ದಿನಾಂಕ:21.08.2014ರ ಅಧಿಸೂಚನೆಯಲ್ಲಿ ಅರ್ಹ ಹಾಗೂ ಆಸಕ್ತಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಅರ್ಹ ಅಭ್ಯರ್ಥಿಗಳಲ್ಲಿ ಬಿ.ಡಿ.ಎಸ್. ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಚಾಲ್ತಿಯಲ್ಲಿರುವ ಮೀಸಲಾತಿಗೊಳಪಟ್ಟು 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆದು ದಿನಾಂಕ:03.12.2014ರಂದು ಸಂದರ್ಶನ ನಡೆಸಲಾಯಿತು. ಸಂದರ್ಶನಕ್ಕೆ ಗರಿಷ್ಠ 15 ಅಂಕಗಳನ್ನು ನಿಗದಿ ಮಾಡಲಾಗಿತ್ತು. ದಂತ ಆರೋಗ್ಯಾಧಿಕಾರಿ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ಶೇಕಡವಾರನ್ನು ಶೇಕಡಾ 85ಕ್ಕೆ ಲೆಕ್ಕಾಚಾರ ಮಾಡಿ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಒಟ್ಟುಗೂಡಿಸಿ ಮೆರಿಟ್ ಪಟ್ಟಿಯನ್ನು ತಯಾರಿಸಿ ಅದೇ ದಿನ ಸಂಸ್ಥೆಯ ವೆಬ್‌ಸೈಟ್ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ.

ಉಲ್ಲೇಖ(4)ರ ದಿನಾಂಕ:26.12.2014ರ ಈ ಕಛೇರಿಯ ಅಧಿಸೂಚನೆಯಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿ, ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಬಾಧಿತವಾಗಿರುವ ಅಭ್ಯರ್ಥಿಗಳಿದ್ದರೆ ಆಕ್ಷೇಪಣೆ/ಮನವಿಗಳನ್ನು ಸಮರ್ಪಕವಾದ ದಾಖಲಾತಿಗಳೊಂದಿಗೆ ಈ ಅಧಿಸೂಚನೆ ಪ್ರಕಟವಾದ 1 ವಾರದೊಳಗೆ ಸಂಸ್ಥೆಯ ನಿರ್ದೇಶಕರು ಸಲ್ಲಿಸುವಂತೆ ಸೂಚಿಸಲಾಗಿತು.

ಸದರಿ ತಾತ್ಕಾಲಿಕ ಪಟ್ಟಿಗೆ 1 ಆಕ್ಷೇಪಣೆಗಳು ನಿಗದಿತ ಅವಧಿಯೊಳಗೆ ಸ್ವೀಕೃತವಾಗಿದ್ದು ಆಕ್ಷೇಪಣೆಗಳನ್ನು ಪರಿಶೀಲಿಸಿ ಸದರಿ ಆಕ್ಷೇಪಣೆಗಳು ಅರ್ಜಿಗಳನ್ನು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಅದರಂತೆ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಲಾಗಿರುತ್ತದೆ.

ಮೀಸಲಾತಿ ಮತ್ತು ಮೆರಿಟ್‌ನ ಆಧಾರದ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಹಾಗೂ ಹೆಚ್ಚುವರಿ ಪಟ್ಟಿಯನ್ನು ಈ ಕೆಳಕಂಡಂತೆ ತಯಾರಿಸಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.